# ಶ್ರುತಿಯ ಆ ಬಾಲ್ಯ ಈ ಯೌವನ

■ ವಿಶಾಖ ಎನ್



ಶ್ರುತಿ ಹಾಸನ್ ತಮ್ಮ ಬಾಲ್ಯದ ಘಟನೆಯೊಂದನ್ನು ನೆನೆದು ಟಾಕ್ ಶೋ ಒಂದರಲ್ಲಿ ಗೊಳ್ಳನೆ ನಕ್ಕರು. ಆ ದಿನಗಳನ್ನು ನೆನೆದರೆ ಅವರ ತಂದೆ ಕಮಲಹಾಸನ್ ಮುಖ ಈಗಲೂ ಅರಳುತ್ತದಂತೆ.

ಆಗ ಶ್ರುತಿ ಒಂಬತ್ತು ವರ್ಷದ ಬಾಲಕಿ. ಒಂದು ದಿನ, ‘ನಾನು ಫೇಮಸ್ ತಂದೆ–ತಾಯಿಯ ಮಗಳಾಗಬೇಕಿತ್ತು. ಈ ಮನೆ ಬೇಡ’ ಎಂದು ಹೊರನಡೆಯಲು ಅನುವಾಗಿದ್ದಳು. ಅದನ್ನು ನೋಡಿ ಕಮಲಹಾಸನ್ ದಂಗಾಗಿದ್ದರು. ‘ನನ್ನ ಸಿನಿಮಾಗಳನ್ನು ಅನೇಕರು ನೋಡುತ್ತಾರೆ. ನಾನೂ ಫೇಮಸ್ಸು ಕಣೇ ಮಗಳೆ...’ ಎಂದು ಸಂತೈಸುವ ದನಿಯಲ್ಲಿ ಆಗ ಕಮಲ್ ಹೇಳಿದ್ದರು. ಅದಕ್ಕೂ ಶ್ರುತಿ ಸಮಾಧಾನಗೊಂಡಿರಲಿಲ್ಲ.

‘ನನ್ನ ದೃಷ್ಟಿಯಲ್ಲಿ ಆಗ ಫೇಮಸ್ ಎಂದರೆ ಐನ್‌ಸ್ಟೈನ್ ತರಹದವರು ಎಂದಿತ್ತು. ನಾನು ಅಂಥ ವಿಜ್ಞಾನಿಯ ಮಗಳಾಗಿದ್ದರೆ ಇನ್ನೂ ಚೆನ್ನಾಗಿರುತ್ತಿದ್ದೆನೋ ಏನೋ ಎಂಬ ಭಾವನೆ ಇತ್ತು. ಅದಕ್ಕೇ ಹಾಗೆ ಅಪ್ಪನ ಬಳಿ ಹೇಳಿದ್ದೆ’ ಎಂದು ಶ್ರುತಿ ಆ ಘಟನೆಗೆ ಕಾರಣ ನೀಡಿದರು.

ಬಾಲ್ಯದಲ್ಲಿ ಪ್ರತಿರೋಧ ಭಾವವನ್ನೇ ತುಳುಕಿಸುತ್ತಿದ್ದ ಶ್ರುತಿ, ಆಮೇಲೆ ತಂದೆ–ತಾಯಿಯಂತೆಯೇ ನಟನೆಯ ಹಾದಿಯಲ್ಲಿ ನಡೆದರು. 2009ರಿಂದ ಅಭಿನಯಲೋಕಕ್ಕೆ ಕಾಲಿಟ್ಟರು. ‘ಲಕ್’, ‘ಏಳಾದೇ ಅರಿವು’, ‘ಗಬ್ಬರ್ ಸಿಂಗ್’, ‘ರಾಮಯ್ಯಾ ವಸ್ತಾವಯ್ಯ’, ‘ಗಬ್ಬರ್ ಈಸ್ ಬ್ಯಾಕ್’, ‘ವಕೀಲ್ ಸಾಬ್’ – ಇವು ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿ ಶ್ರುತಿ ಅಭಿನಯಿಸಿರುವ ಚಿತ್ರಗಳು.

ಶಂತನು ಹಜಾರಿಕಾ ಎಂಬ ಕಲಾವಿದನೊಟ್ಟಿಗೆ ಈಗ ಪ್ರೀತಿಯಲ್ಲಿರುವ ಶ್ರುತಿ, ಆ ಸಂಬಂಧದ ಕುರಿತೂ ಮುಕ್ತವಾಗಿ ಮಾತನಾಡಿದ್ದಾರೆ. ಶಂತನು ಹಾಗೂ ಶ್ರುತಿ ಇಬ್ಬರಿಗೂ ಒಬ್ಬರು ಸ್ನೇಹಿತರು. ಅವರಿಗಾಗಿ ಶಂತನು ಒಂದು ಆರ್ಟ್ ವರ್ಕ್ ಮಾಡಿಕೊಟ್ಟರು. ಆ ಪ್ರಕ್ರಿಯೆ ಚಾಲ್ತಿಯಲ್ಲಿದ್ದಾಗ ಪರಸ್ಪರ ಅಪರಿಚಿತರಾಗಿದ್ದರು ಶ್ರುತಿ–ಶಂತನು. ಆಮೇಲೆ ಆ ಆರ್ಟ್‌ವರ್ಕ್ ನೋಡಿ ಶ್ರುತಿ ಫಿದಾ ಆದರು. ಅದನ್ನು ರಚಿಸಿದ್ದು ಶಂತನು ಎಂದು ಗೊತ್ತಾದ ಮೇಲೆ ಮೊಬೈಲ್ ನಂಬರ್‌ಗಳು ವಿನಿಮಯವಾದವು. ಪರಸ್ಪರ ಮಾತುಕತೆ ಶುರುವಾಯಿತು.

‘ಮೊದಲು ನಾನು ಪ್ರೇಮ–ಪ್ರೀತಿಯ ವಿಷಯವನ್ನು ಗುಟ್ಟು ಮಾಡುತ್ತಿದ್ದೆ. ಅದರಿಂದ ವೃತ್ತಿ ಬದುಕಿಗೆ ಸಮಸ್ಯೆಯಾಗಬಹುದು ಎಂದು ಕೆಲವರು ಕಿವಿ ಊದಿದ್ದರು. ಆಮೇಲೆ ಬೇರೆಯವರನ್ನು ಮೆಚ್ಚಿಸಲು ನಾವು ಯಾಕೆ ಬದುಕಬೇಕೆಂದು ಪ್ರೀತಿಯ ವಿಷಯವನ್ನೀಗ ಮುಕ್ತವಾಗಿ ಹೇಳಿಕೊಳ್ಳುತ್ತೇನೆ’ ಎಂದು ಶ್ರುತಿ ಬಿಂದಾಸ್ ಆಗಿ ಹೇಳಿದ್ದಾರೆ.

## ವಿಜಯ್‌ಗೆ ಟೈಸನ್ ಭೇಟಿಯ ಪುಳಕ



ವಿಜಯ್ ದೇವರಕೊಂಡ

ವಿಜಯ್ ದೇವರಕೊಂಡ ಹೆಚ್ಚು ಸುದ್ದಿಯಾದದ್ದು ರಶ್ಮಿಕಾ ಮಂದಣ್ಣ ಜತೆಯಲ್ಲಿದ್ದಾಗಲೇ. ಆದರೆ, ಕಳೆದ ವಾರ ಅವರು ಲಾಸ್ ಏಂಜಲೀಸ್‌ನಲ್ಲಿ ಮೈಕ್ ಟೈಸನ್ ಅವರೊಟ್ಟಿಗೆ ಅಭಿನಯಿಸಿ ಸದ್ದು ಮಾಡಿದರು. ಅಷ್ಟೇ ಅಲ್ಲ, ಖುದ್ದು ಪುಳಕಿತರಾದರು.



ಮೈಕ್ ಟೈಸನ್

ಪೂರಿ ಜಗನ್ನಾಥ್ ನಿರ್ದೇಶನದ ‘ಲೈಗರ್’ ತೆಲುಗು ಭಾಷೆಯಲ್ಲಷ್ಟೇ ಅಲ್ಲದೆ ಇನ್ನೂ ನಾಲ್ಕು ಭಾಷೆಗಳಲ್ಲಿ ತೆರೆಕಾಣಲು ಸಿದ್ಧವಾಗುತ್ತಿದೆ. ಸಾಹಸಪ್ರಧಾನವಾದ ಈ ಚಿತ್ರದ ಬಗೆಗೆ ವಿಜಯ್ ದೇವರಕೊಂಡ ಅವರಿಗೆ ಮಹತ್ವಾಕಾಂಕ್ಷೆ ಇದೆ.

‘ಚಿಕ್ಕಂದಿನಿಂದ ಮೈಕ್ ಟೈಸನ್ ಎಂದರೆ ರೋಮಾಂಚನಗೊಳ್ಳುತ್ತಿದ್ದೆ. ಈಗ ಅವರನ್ನು ಪ್ರತ್ಯಕ್ಷವಾಗಿ ನೋಡುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಇಂತಹ ಕ್ಷಣಗಳು ಎಲ್ಲರಿಗೂ ಸಿಗುವುದಿಲ್ಲ. ನನ್ನ ಬದುಕಿಗೆ ಚಿರ ಋಣಿಯಾಗಿರುತ್ತೇನೆ’ ಎಂದು ವಿಜಯ್ ಆನಂದತುಂದಿಲರಾಗಿ ಪ್ರತಿಕ್ರಿಯಿಸಿದ್ದಾರೆ. ಇನ್‌ಸ್ಟಾಗ್ರಾಂ, ಟ್ವಿಟ್ಟರ್‌ಗಳಲ್ಲೂ ಟೈಸನ್ ಒಟ್ಟಿಗೆ ಕಳೆದ ಕ್ಷಣಗಳ ಮೆಲುಕು ಹಾಕಿದ್ದಾರೆ.

ಮುಂದಿನ ವರ್ಷ ‘ಲಿಗರ್’ ಚಿತ್ರ ತೆರೆಕಾಣುವ ನಿರೀಕ್ಷೆ ಇದೆ. ವಿಜಯ್‌ಗೆ ಜೋಡಿಯಾಗಿ ಅನನ್ಯಾ ಪಾಂಡೆ ನಟಿಸಿದ್ದು, ರಮ್ಯಾ ಕೃಷ್ಣ ಕೂಡ ಪ್ರಮುಖ ಪಾತ್ರದಲ್ಲಿದ್ದಾರೆ. ■




॥ ಶ್ರೀ ಗುರು ಓಂ ಶ್ರೀ ಸಾಯಿರಾಂ ॥

Indian Famous Astrologer

ಬಿಳಿಗಿರಿ ರಂಗನ ಬೆಟ್ಟದಿಂದ ನೇರ ಪರಿಹಾರ



ಓಂ ಶ್ರೀ ಸಾಯಿ ಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು

ಕೇರಳದ ಮಹಾಜ್ಞಾನಿ ದೈವಜ್ಞ
ಪಂ॥ ಬಿ. ಗುರುಪ್ರಸಾದ್
ಮಾತಾ ಕಾಳಿಕಾದೇವಿ ಆರಾಧಕರು

ಕೇರಳದ ಅಷ್ಟಮಂಗಲ ಪ್ರಶ್ನೆ, ಆರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಪೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಸಮಸ್ಯೆಗಳಾದ ವಿದ್ಯೆ, ಮದುವೆ, ವಿದೇಶ ಪ್ರಯಣ, ಆರೋಗ್ಯ, ಸಂತಾನ, ಮಾಟ–ಮಂತ್ರ, ಶತ್ರುನಾಶ, ಸ್ತ್ರೀ–ಪುರುಷ ವಶೀಕರಣ, ಕೋರ್ಟ್ ಕೇಸ್ ವ್ಯಾಪಾರದಲ್ಲಿ ತೊಂದರೆ ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕೆರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿ ಚಾತನ್ ತಪೋ ಶಕ್ತಿಯಿಂದ 3 ದಿನಗಳಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ.

Get your Any Problem 100% Solutions wit in 3 Days

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಪೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.

ವಿ.ಸೂ: ನಮ್ಮನ್ನು ಬಿಟ್ಟು ಬೇರೆ ಯಾರಾದರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

ಬೆಂಗಳೂರಿನಲ್ಲಿ ಲಭ್ಯವಿರುತ್ತಾರೆ

ನಿಮ್ಮ ಯಾವುದೇ ಸಮಸ್ಯೆ ಇದ್ದರು ಗುಪ್ತವಾಗಿ ಇಡಲಾಗುವುದು.

9972851544